ದಿಃ 26-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಬಿ.ಎಲ್ 4 ನೇ ಪ್ರತಿವಾದಿ ಪರ ವಕೀಲರಿಂದಃ

ದಾವಾ ಆಸ್ತಿಯಲ್ಲಿ ಭಾಗಬೇಕೆಂದು ನಾವು ಈ ದಾವೆಯನ್ನು ಹೂಡಿದ್ದೇವೆ. ದಾವಾ ಆಸ್ತಿಯ 4 ರಲ್ಲಿ 1 ಭಾಗ ನನಗೆ ಬರಬೇಕಿದೆ. ಇನ್ನು ಉಳಿದ 3 ಭಾಗಗಳು ನನ್ನ ಅಣ್ಣಂದಿರಾದ ಶ್ರೀನಿವಾಸಪ್ಪ, ವೆಂಕಟೇಶಪ್ಪ ಹಾಗೂ ಮಂಜುನಾಥರವರಿಗೆ ಸೇರಿಬೇಕಿದೆ. ನನ್ನ ತಂದೆಗೆ 4 ಜನ ಅಣ್ಣ-ತಮ್ಮಂದಿರಿದ್ದರು. ನನ್ನ ತಂದೆಯ ಸಹೋದರರ ಹೆಸರುಗಳು ವೆಂಕಟಶ್ಯಾಮಪ್ಪ, ನಾನಪ್ಪ ಹಾಗೂ ಪಿಳ್ಳಪ್ಪ. ನನ್ನ ತಂದೆ ಮತ್ತು ಅವರ ಸಹೋದರರಿಗೆ ಒಟ್ಟು 14 ಎಕರೆಯಷ್ಟು ಆಸ್ತಿಗಳಿವೆ. ಸದರಿ 14 ಎಕರೆ ಜಮೀನು 2006 ರಲ್ಲಿ ವಿಭಾಗವಾಗಿದೆ. ನನ್ನ ತಂದೆ ಮತ್ತು ಅವರ ಸಹೋದರರು ಮೊದಲಿಗೆ ಒಟ್ಟಿಗೆ ಇದ್ದರು ಆದರೆ ಈಗ ಬೇರೆ ಬೇರೆಯಾಗಿ ವಾಸವಿದ್ದಾರೆ. ನನ್ನ ತಂದೆ ಮತ್ತು ಅವರ ಸಹೋದರರು 2010-12 ರವರೆಗೆ ಒಟ್ಟಿಗೆ ಇದ್ದರು. ನನ್ನ ತಾತನಿಗೆ ಒಂದು ಮನೆ ಸೇರಿತ್ತು. ನನ್ನ ತಾತನ ಒಂದು ಮನೆಯಲ್ಲಿ ಅವರ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ. ಸದರಿ ಮನೆಯಲ್ಲಿ ಪ್ರಸ್ತುತವಾಗಿ ಯಾರೂ ವಾಸಿಸುತ್ತಿಲ್ಲ. ನನ್ನ ತಂದೆ ಮತ್ತು ಅವರ ಸಹೋದರರು ಪ್ರತ್ಯೇಕವಾದ ಮನೆಗಳನ್ನು ಕಟ್ಟಿಸಿಕೊಂಡು ಸುಮಾರು 5-6 ವರ್ಷಗಳು ಕಳೆದಿವೆ.

ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. 1 ನೇ ಪ್ರತಿವಾದಿಯ ತಂದೆಯಾದ ಪಿಳ್ಳಪ್ಪ ಅಲಿಯಾಸ್ ಭೀಮಯ್ಯರವರು 4 ಎಕರೆ ಜಮೀನಿನ ಸ್ವಾಧೀನದಲ್ಲಿದ್ದಾರೆ. ಪೂ-ಶ್ರೀನಿವಾಸಪ್ಪ ಎಂದರೆ ನನ್ನ ಜಮೀನು, ಪ-ಚಿನ್ನೇಗೌಡರವರ ಜಮೀನು, ಉ-ಸರ್ವೆ ನಂ. 39 ಹಾಗೂ ದ-ಪಿ.ಡಬ್ಲ್ಯೂ.ಡಿ ರಸ್ತೆ ಈ ಚೆಕ್ಕುಬಂದಿ ಮಧ್ಯೆ ಇರುವ ಜಾಗದಲ್ಲಿ 1 ನೇ ಪ್ರತಿವಾದಿಯ ತಂದೆಯವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ತೀರಿಕೊಂಡ ನಂತರ ಅವರ ಇಬ್ಬರು ಮಕ್ಕಳಾದ 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿಯ ಗಂಡರವರು ಸದರಿ ಚೆಕ್ಕುಬಂದಿಯ ಜಮೀನಿನಲ್ಲಿ ಫವತಿ ವಾರಸು ಮೂಲಕ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಚೆಕ್ಕುಬಂದಿ ಪೂ-ಶ್ರೀನಿವಾಸಪ್ಪರವರ ಜಮೀನು, ಪ-ಚಿನ್ನೇಗೌಡರವರ ಜಮೀನು, ಉ-ಸರ್ವೆ ನಂ. 39 ಹಾಗೂ ದ-ಪಿ.ಡಬ್ಲ್ಯೂ.ಡಿ ರಸ್ತೆ. ಸದರಿ ಚೆಕ್ಕುಬಂದಿಯ ಮಧ್ಯೆ ಒಟ್ಟು 4 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನ ಖಾತೆಯು ಪ್ರಸ್ತುತ 1 ಮತ್ತು 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ಪಿಳ್ಳಪ್ಪ ಅಲಿಯಾಸ್ ಭೀಮಯ್ಯರವರಿಂದ ಸದರಿ ಆಸ್ತಿಯ ಖಾತೆಯು 1 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ಫವತಿ ವಾರಸು ಮೂಲಕ ಬಂದಿರುತ್ತದೆ ಎಂದರೆ ಗೊತ್ತಿಲ್ಲ.

ದಾವಾ ಸರ್ವೆ ನಂ. 149 ರ ಹಳೇ ಸರ್ವೆ ನಂ. 39 ಆಗಿರುತ್ತದೆ. ಸದರಿ ಸರ್ವೆ ನಂ. 39 ರ ಜಮೀನು ಮೂಲತಃ 1 ನೇ ಪ್ರತಿವಾದಿಯ ತಂದೆಗೆ ಮಂಜೂರಾಗಿದ್ದ ಜಮೀನು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಮೀನು ನನ್ನ ತಾತನಾದ ಭೀಮಯ್ಯರವರಿಗೆ ಮಂಜೂರಾಗಿತ್ತು

ಎಂದು ನುಡಿಯುತ್ತಾರೆ. ನನ್ನ ತಾತನಿಗೆ 1945-46 ರಲ್ಲಿ ಸದರಿ ಜಮೀನು ಮಂಜೂರಾಗಿತ್ತು. 1 ನೇ ಪ್ರತಿವಾದಿಯ ತಂದೆ ಹಾಗೂ ನನ್ನ ತಾತನಿಗೆ ಪ್ರತ್ಯೇಕವಾಗಿ ತಲಾ 4 ಎಕರೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯ ತಂದೆಗೆ ಜಮೀನು ಮಂಜೂರಾಗಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತನಿಗೆ ಜಮೀನು ಮಂಜೂರಾಯಿತು ಎಂದು ತೋರಿಸಲು ಸಂಬಂಧಪಟ್ಟ ಮಂಜೂರಾತಿ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇವೆ. ಸದರಿ ಮಂಜೂರಾತಿ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ಮಂಜೂರಾತಿ ಪತ್ರದಲ್ಲಿ ಬರೆದಿರುವ ಸರ್ವೆ ನಂಬರ್ ಅನ್ನು ನಾನು ತಿಳಿದುಕೊಂಡಿದ್ದೇನೆ. ಸದರಿ ಮಂಜೂರಾತಿ ಪತ್ರದಲ್ಲಿ ಮಂಜೂರಾದ ಜಾಗದ ಪೂರ್ವಕ್ಕೆ ಶ್ರೀನಿವಾಸಪ್ಪರವರ ಜಮೀನು, ಪ-ಚೆನ್ನೇಗೌಡರವರ ಜಮೀನು, ಉ-ಸರ್ವೆ ನಂ.39 ಹಾಗೂ ದ-ಪಿ.ಡಬ್ಲ್ಯೂ.ಡಿ ರಸ್ತೆ ಎಂದು ನಮೂದಾಗಿರುತ್ತದೆ.

1 ಮತ್ತು 4 ನೇ ಪ್ರತಿವಾದಿಗಳು ಫವತಿ ವಾರಸು ಮೂಲಕ ತಮ್ಮ ಹೆಸರುಗಳಿಗೆ ಖಾತೆಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸಿದಾಗ ಅದರ ವಿರುದ್ಧ ನಾನು ಕಂದಾಯ ಅಧಿಕಾರಿಗಳ ಮುಂದೆ ತಕರಾರನ್ನು ಸಲ್ಲಿಸಿದೆನು ಎಂದರೆ ಸರಿ. ನನ್ನ ತಾತನಿಗೆ ಸದರಿ ಜಮೀನು ಮಂಜೂರಾಗಿತ್ತು ಎಂದು ಸದರಿ ತಕರಾರಿನಲ್ಲಿ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯು ತಮಗೆ ಸೇರಬೇಕೆಂದು ನನ್ನ ತಂದೆಯವರು ಯಾವುದೇ ದಾವೆಯನ್ನು ಹೂಡಿರಲಿಲ್ಲ. ನನ್ನ ತಂದೆ ತೀರಿಕೊಂಡು ಸುಮಾರು 20 ವರ್ಷಗಳು ಕಳೆದಿವೆ. ನನ್ನ ತಾತ ಭೀಮಯ್ಯರವರು ತೀರಿಕೊಂಡು ಸುಮಾರು 40 ವರ್ಷಗಳು ಕಳೆದಿವೆ. ನನ್ನ ತಾತ ಯಾವ ಇಸವಿಯಲ್ಲಿ ತೀರಿಕೊಂಡರು ಎಂದು ತೋರಿಸಲು ನಮ್ಮ ಬಳಿ ಅವರ ಮರಣ ಪ್ರಮಾಣ ಪತ್ರವು ಇರುವುದಿಲ್ಲ. ನನ್ನ ತಾತನ ಜೀವಿತಾಕಾಲದಲ್ಲಿ ಅವರು ಮತ್ತು ಅವರ ಸಹೋದರರೆಲ್ಲರೂ ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದರೆ ಸರಿ.

ನನ್ನ ತಾತನಿಗೆ ಇಬ್ಬರು ಅಣ್ಣತಮ್ಮಂದಿರು ಇದ್ದಿರಬಹುದು. ನನ್ನ ತಾತನ ಸಹೋದರರ ಹೆಸರುಗಳು ನನಗೆ ಗೊತ್ತಿಲ್ಲ. ನನ್ನ ತಾತ ಮತ್ತು 1 ನೇ ಪ್ರತಿವಾದಿಯ ತಂದೆಯು ಅಣ್ಣ-ತಮ್ಮಂದಿರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯ ತಂದೆಯು ನನ್ನ ತಾತನ ಮಗ ಎಂದು ನುಡಿಯುತ್ತಾರೆ. ನನ್ನ ತಾತನಿಗೆ 4 ಜನ ಮಕ್ಕಳಿದ್ದರು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು